ಆಶ್ಚರ್ಯದಿಂದ, ಭಯದಿಂದ ನೋಡಿಕೊಂಡು ಎತ್ತರದ ದೃಢಸ್ವರದಲ್ಲಿ ನಿವೇದಿಸಿದ, "ಎಷ್ಟು ಬೇಕು ತಮಗೆ? ಇಪ್ಪತ್ತು ಲಕ್ಷ? ಮೂವತ್ತು ಲಕ್ಷ?"

ಡಾಕ್ಟರ್ ಮೌನವಾಗಿಯೇ ಇದ್ದರು. ಅವರಿಗೇನೂ ತಿಳಿಯಲಿಲ್ಲ. ಅವನು ಹೇಳುತ್ತಲೇ ಹೋದ, "ನಾನು ನಿಮ್ಮಿಂದಾಗಿಯೇ ಈ ಹೊತ್ತು ಉಸಿರಾಡ್ತಾ ಇದ್ದೀನಿ. ಇಂದು ನಿಮ್ಮಿಂದಾಗಿಯೇ ನಾನು ಈ ಭೂಮಿಯ ಸಕಲ ಆನಂದಗಳನ್ನು ಅನುಭವಿಸಲು ಸಮರ್ಥನಾಗಿದ್ದೇನೆ. ಡಾಕ್ಟರ್ ನನಗೆ ಜೀವನ ಕೊಟ್ಟ ನಿಮಗೆ ಋಣಿಯಾಗಿದ್ದೇನೆ. ನೀವು ನನ್ನ ಜೀವದಾತರು. ಹೇಳಿ... ಏನೇ ಹೇಳಿದರೂ ನಿಮ್ಮ ಸೇವೆಗೆ ನಾನು ಸಿದ್ಧನಾಗಿದ್ದೇನೆ. ನಿಸ್ಸಂಕೋಚವಾಗಿ ಕೇಳಿ. ನನ್ನ ಬಳಿ ಸಂಪತ್ತಿಗೇನೂ ಕೊರತೆ ಇಲ್ಲ. ನನ್ನ ಸರ್ವಸ್ವವನ್ನು ಕೊಟ್ಟರೂ ನಾನು ನಿಮ್ಮ ಋಣ ತೀರಿಸಲಾರೆ. ಆದರೂ ನನ್ನ ಕೈಯಲ್ಲಿ ಏನಾಗುತ್ತೋ ಅದನ್ನು ಮಾಡಲು ನಾನು ತುಂಬ ಕಾತರನಾಗಿದ್ದೇನೆ. ಡಾಕ್ಟರೇ ನಿಮಗೆ ಇಷ್ಟ ಬಂದದ್ದನ್ನು ನನಗೆ ಆಜ್ಞೆ ಮಾಡಿ..." ಎಂದನು.

ಒಂದು ಕ್ಷಣದ ಅನಂತರ ಸಮಸ್ಥಿತಿಗೆ ಬರುತ್ತ ಆರ್ಡರ್ಲಿಯ ಕಡೆ ತಿರುಗಿ, "ಇದು ಯಾರು ಹುಚ್ಚ ಇಲ್ಲಿಗೆ ಬಂದುಬಿಟ್ಟಿರೋನು? ಇವನನ್ನು ಇಲ್ಲಿಂದ ಹೊರಕ್ಕೆ ಕಳಿಸು" ಎಂದರು.

"ಅರೇ... ಬೇಡ.. ಬೇಡ..." ಎಂದು ಹೇಳುತ್ತ ಆ ಮನುಷ್ಯನು ಸೈನಿಕನಂತೆ ಟೇಬಲ್ ಮೇಲೆ ಅದೆಷ್ಟು ಜೋರಾಗಿ ಮುಷ್ಟಿಯಿಂದ ಗುದ್ದಿದನೆಂದರೆ ಆ ಆರ್ಡರ್ಲಿ ಎಲ್ಲಿದ್ದನೋ ಅಲ್ಲೇ ನಿಂತುಕೊಂಡು ಹೆದರಿದ ನೋಟದಿಂದ ಅವನ ಕಡೆ ನೋಡತೊಡಗಿದ.

ಅವನು ಮತ್ತೆ ಹೇಳತೊಡಗಿದ, "ಏನು ಡಾಕ್ಟ್ರೇ, ನಿಮಗೆ ನನ್ನ ಗುರುತು ಸಿಕ್ತಾ ಇಲ್ಲವೆ? ನಾನು ಸುಳ್ಳು ಹೇಳುತ್ತಾ ಇಲ್ಲ. ನಿಜಕ್ಕೂ ಹೇಳಬೇಕು ಅಂದರೆ ತಾವು ನನ್ನ ಜೀವರಕ್ಷಕರು. ನನ್ನನ್ನು ಮೃತ್ಯುವಿನ ಬಾಯಿಂದ ಹೊರತಂದವರು ನೀವೇ. ನೀವು 'ನಾಯಿಸ್'ಗೆ ಕಳಿಸಿ ಕೇವಲ 'ವಾಟರ್–ಕ್ರಸ್' ಮಾತ್ರ ಸೇವಿಸಬೇಕು ಅಂತ ಹೇಳಿದ್ದಿರಲ್ಲ, ಆ ಮನುಷ್ಯ ನಾನೇ. ಎರಡೂ ಶ್ವಾಸಕೋಶಗಳು ಹಾಳಾಗಿ ಹೋಗಿದ್ದಾವೆ ಅಂತ ನೀವು ಹೇಳಿದ್ದ ಮನುಷ್ಯ ನಾನೇ. 'ನಾಯಿಸ್'ನಲ್ಲಿ 'ವಾಟರ್–ಕ್ರಸ್' ಮೇಲೇನೇ ಇಷ್ಟು ದಿವಸ ಇದ್ದೀನಿ. ಅದರ ಪರಿಣಾಮವಾಗಿಯೇ ನನ್ನನ್ನು ನೀವು ಈ



ರೂಪದಲ್ಲಿ ನೋಡ್ತಾ ಇದ್ದೀರಿ. ಇದೆಲ್ಲ ನಿಮ್ಮ ಚಿಕಿತ್ಸೆಯ ಪ್ರಭಾವ. ಇನ್ನೂ ನಿಮಗೆ ನಂಬಿಕೆ ಬರದೆ ಇದ್ದರೆ ಇದು ನೋಡಿ..." ಎಂದು ಹೇಳುತ್ತ ಅವನು ತನ್ನ ಎದೆಯ ಮೇಲೆ ಮುಷ್ಟಿಯಿಂದ ಜೋರು ಜೋರಾಗಿ ಗುದ್ದಿಕೊಳ್ಳತೊಡಗಿದ. ಆ ಮುಷ್ಟಿ ಪ್ರಹಾರದಿಂದ ಯಾವುದೇ ಭಾರೀ ಅಸ್ಥಿಪಂಜರವಾದರೂ ಸಡಿಲಗೊಳ್ಳಬಹುದು. ಆದರೆ, ಅವನ ವಜ್ರದಂಥ ಎದೆಯ ಮೇಲೆ ಆ ಏಟಿನ ಪ್ರಭಾವವೇ ಆಗಲಿಲ್ಲವೇನೋ ಎಂಬಂತಿದ್ದ... ಕೆಲವು ಕ್ಷಣಗಳ ಕಾಲ ಡಾಕ್ಟರು ಮಾತಿಲ್ಲದೆ ಮೂಕರಾಗಿದ್ದರು. ಅನಂತರ ಅವನನ್ನು ಗಮನವಿಟ್ಟು ನೋಡಿ ಒಮ್ಮೆಲೇ ಆಶ್ಚರ್ಯದಿಂದ ಎದ್ದು ನಿಲ್ಲುತ್ತ ಹೇಳಿದರು, " ನಿಜಕ್ಕೂ ನೀವು... ಅದೇ ಕೋಟ್ಯಧಿಪತಿಯೇನು?"

"ಹೌದು ಡಾಕ್ಟರ್! ನಾನು ಅವನೇ... ಅವನೇ" ಅವನು ಎತ್ತರದ ದನಿಯಲ್ಲಿ, "ನಿನ್ನೆ ತಾನೆ ನಾನು ಹಡಗಿನಿಂದ ಇಳಿದೆ. ಇಳಿದ ಕೂಡಲೇ ಎಲ್ಲಕ್ಕಿಂತ